# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –145ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಹೊಂಬೇಗೌಡನಗರ ವಾರ್ಡ್–145 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ಲಕ್ಷ್ಮೀದೇವಿ ಆರ್. ಉಪ ಆಯುಕ್ತರು ಕಂದಾಯ (ದಕ್ಷಿಣ), ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ದಿನಾಂಕ:11/04/2022ರ ಸೋಮವಾರದಂದು ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಉಪ ಆಯುಕ್ತರು (ದಕ್ಷಿಣ) ಹಾಗೂ ವಾರ್ಡ್ 145ರ ನೋಡಲ್ ಅಧಿಕಾರಿ.
2. ಕೆಲಸ ಪರಿವೀಕ್ಷಕರು ವಾರ್ಡ್–145.
3. ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–145.
4. ಕಿರಿಯ ಇಂಜಿನಿಯರ್ (ವಿದ್ಯುತ್ ವಿಭಾಗ ಬಿಬಿಎಂಪಿ).
5. ತೋಟಗಾರಿಕೆ ಇಲಾಖೆ, ಮೇಸ್ತ್ರಿ ವಾರ್ಡ್ 145.
6. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಕಾನೂನು ಸುವ್ಯವಸ್ಥೆ ವಾರ್ಡ್ 145.
7. ನಾಗರೀಕ ಕಲ್ಯಾಣ ಸಂಘದ ಸದಸ್ಯರು ಮತ್ತು ಸಾರ್ವಜನಿಕರು.
8. ಸಹಾಯಕ ಇಂಜಿನಿಯರ್ (BWSSB).
9. ವಿಲ್ಸನ್‌ಗಾರ್ಡನ್ ಪೊಲೀಸ್ ಠಾಣೆ ಸಂಚಾರ ವಾರ್ಡ್ 145.
10. ಸಹಾಯಕ ಇಂಜಿನಿಯರ್ (ಬೆಸ್ಕಾಂ)

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಪೊಲೀಸ್ ಇಲಾಖೆ ಅಧಿಕಾರಿಗಳು (ಕಾನೂನು ಸುವ್ಯವಸ್ಥೆ) ಆಡುಗೋಡಿ.

*********

1. ವಾರ್ಡ್ ವ್ಯಾಪ್ತಿಯ ವಿಲ್ಸನ್‌ಗಾರ್ಡನ್ 9ನೇ "ಎ" ಅಡ್ಡರಸ್ತೆಯ ಕಾಮಗಾರಿಯ ಬಗ್ಗೆ ಚರ್ಚಿಸಲಾಯಿತು ಈ ವಿಷಯದ ಬಗ್ಗೆ ವಾರ್ಡ್ ಇಂಜಿನಿಯರ್‌ರವರು ಮಾತನಾಡಿ 10 ದಿನದಲ್ಲಿ ರಸ್ತೆ ಕಾಮಗಾರಿ ಪ್ರಾರಂಭಿಸುವುದಾಗಿ ಸಭೆಯಲ್ಲಿ ತಿಳಿಸಿದರು.



Scanned with CamScanner

2. ವಾರ್ಡ್ ವ್ಯಾಪ್ತಿಯ ಹೊಸೂರು ರಸ್ತೆಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅಧ್ಯಕ್ಷರು ಮಾತನಾಡಿ ವಾರ್ಡಿನ ಮುಂದಿನ ಸಭೆಗೆ ರಸ್ತೆ ಮುತ್ತು ಮೂಲಭೂತ ಸೌಕರ್ಯದ ಇಂಜಿನಿಯರ್‌ಗಳನ್ನು ಸಭೆಗೆ ಆಹ್ವಾನಿಸಲಾಗುವುದು ಎಂದು ತಿಳಿಸಿದರು.

3. ವಾರ್ಡ್ ವ್ಯಾಪ್ತಿಯಲ್ಲಿ ವಿಲ್ಸನ್‌ಗಾರ್ಡನ್ 6ನೇ ಮತ್ತು 7ನೇ ಅಡ್ಡರಸ್ತೆಯಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿರುವ ಬಗ್ಗೆ ಚರ್ಚಿಸಲಾಯಿತು. ಸಂಬಂಧಿಸಿದಂತೆ ಸಹಾಯಕ ನಿರ್ದೇಶಕರು, ಪಶುಪಾಲನೆ ಇಲಾಖೆ ವತಿಯಿಂದ ಅಧಿಕಾರಿಗಳನ್ನು ಮುಂದಿನ ಸಭೆಗೆ ಆಹ್ವಾನಿಸಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

4. ವಾರ್ಡಿನ ಸ್ಥಳೀಯರು ಮಾತನಾಡಿ ವಿಲ್ಸನ್‌ಗಾರ್ಡನ್ 5ನೇ ಅಡ್ಡರಸ್ತೆಯಲ್ಲಿ ಬಿ.ಎಂ.ಟಿ.ಸಿ ಬಸ್ ಬರಲು ಸಾಧ್ಯವಿಲ್ಲದಿದ್ದರೂ ಬಸ್ಸನ್ನು ಸದರಿ ರಸ್ತೆಯಲ್ಲಿಯೇ ಸಂಚರಿಸುತ್ತಿರುವುದರಿಂದ ಜನರಿಗೆ ತೊಂದರೆಯಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು. ಅಧ್ಯಕ್ಷರು ಮಾತನಾಡಿ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಲಾಗುವುದೆಂದು ತಿಳಿಸಿದರು.

5. ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ತೆಂಗಿನ ಮರಗಳಿಂದ ಬೀಳುವ ತೆಂಗಿನ ಗರಿಗಳನ್ನು ತೆರವುಗೊಳಿಸಲು ಕೋರಿದರು. ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮಾತನಾಡಿ ತೆರವುಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

6. ವಾರ್ಡಿನ ಸ್ಥಳೀಯರು ಮಾತನಾಡಿ ರಾಣಿಪಾರ್ಕ್ ಸುತ್ತಲಿನ 3ನೇ ಮತ್ತು 4ನೇ ಅಡ್ಡರಸ್ತೆಗಳಲ್ಲಿ ಅನಧಿಕೃತ ವಾಹನಗಳ ನಿಡುಗಡೆ ಮಾಡುತ್ತಿದ್ದು, ಪಾರ್ಕ್ ಸುತ್ತಲೂ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದರಿಂದ ಅನಧಿಕೃತ ವಾಹನಗಳ ನಿಲುಗಡೆಯಾಗದಂತೆ ತಡೆಯಲು ಸಭೆಯಲ್ಲಿ ಕೋರಿದರು. ಸದರಿ ವಿಷಯದ ಬಗ್ಗೆ ಪೊಲೀಸ್ ಇಲಾಖೆಯವರೊಂದಿಗೆ ಚರ್ಚಿಸಿ ಸೂಕ್ತ ಕ್ರಮ ವಹಿಸಲಾಗುವುದೆಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

7. ವಾರ್ಡಿನ ಸ್ಥಳೀಯರು ಮಾತನಾಡಿ ಹೊಸೂರು ಮುಖ್ಯರಸ್ತೆಯ ರಸ್ತೆ ಬದಿಯಲ್ಲಿ ಅನಧಿಕೃತವಾಗಿ ಕ್ರೇನ್ ನಿಲ್ಲಿಸಿರುವುದರಿಂದ ಸದರಿ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಮುಖ್ಯವಾಗಿ ಆಂಬುಲೆನ್ಸ್ ಓಡಾಟಕ್ಕೆ ಹಾಗೂ ಸಾರ್ವಜನಿಕರ ಓಡಾಟಕ್ಕೆ ತೀವ್ರ ತರಹದ ತೊಂದರೆಯಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಸದರಿ ಕ್ರೇನ್‌ಗಳನ್ನು ತೆರವುಗೊಳಿಸಲು ಸಂಚಾರ ಪೊಲೀಸ್ ಇಲಾಖೆಯವರಿಗೆ ಸಭೆಯಲ್ಲಿ ಸೂಚಿಸಲಾಯಿತು.



Scanned with CamScanner

8. ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ಬಿಡಾಡಿ ವಾಹನಗಳ ನಿಲುಗಡೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲು ಕೋರಿದರು, ಸದರಿ ವಿಷಯವು ಈಗಾಗಲೇ ಕಾರ್ಯಗತಿಯಲ್ಲಿದ್ದು, ಸಧ್ಯದಲ್ಲಿಯೇ ಕ್ರಮ ಕೈಗೊಳ್ಳಲಾಗುವುದು ಎಂದು ವಾರ್ಡ್‌ನ ಇಂಜಿನಿಯರ್ ರವರು ಸಭೆಗೆ ತಿಳಿಸಿದರು.

9. ವಾರ್ಡಿನ ಸ್ಥಳೀಯರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಸ್ಟ್ರೀಟ್ ಲೈಟ್‌ಗಳು ಹಾಳಾಗಿದ್ದು, ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ದೂರಿದರು. ಕಿರಿಯ ಇಂಜಿನಿಯರ್ ವಿದ್ಯುತ್ (ಬಿಬಿಎಂಪಿ) ರವರು ಮಾತನಾಡಿ ದಿನಾಂಕ:20-04-2022 ರಿಂದ ವಿದ್ಯುತ್ ಸಂಬಂಧಿಸಿದ ಕಾಮಗಾರಿಯನ್ನು ಪ್ರಾರಂಭಿಸಿ ದಿನಾಂಕ:30-04-2022 ರೊಳಗಾಗಿ ಮುಕ್ತಾಯಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

10. ವಾರ್ಡ್ ವ್ಯಾಪ್ತಿಯ ಹೆಚ್. ಸಿದ್ದಯ್ಯ ರಸ್ತೆಯಲ್ಲಿ ಡೆಬ್ರಿಸ್ ಮತ್ತು ಕಸವನ್ನು ತೆರವುಗೊಳಿಸುವಂತೆ ಸಾರ್ವಜನಿಕರು ಸಭೆಯಲ್ಲಿ ಕೋರಿದರು. ವಾರ್ಡಿನ ಅಭಿಯಂತರರು ಮಾತನಾಡಿ ಸದರಿ ರಸ್ತೆಯು ರಸ್ತೆ ಮತ್ತು ಮೂಲಭೂತ ಸೌಕರ್ಯ ರವರ ಕಾರ್ಯವ್ಯಾಪ್ತಿಗೆ ಬರುವುದರಿಂದ ಸದರಿ ವಿಷಯವನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ತೆರವುಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಸಂಬಂಧಟ್ಟ ಇಲಾಖಾವಾರು ಸಮನ್ವಯ ಸಾಧಿಸಿಕೊಂಡು ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ - 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ - 145
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner